ಕರೆ ಮಾಡಿದ್ದ! ಆಮೇಲೆ ಕೆಲವು ದಿನಗಳಲ್ಲಿ ಆತನ ಫೋನು ಸೂರತ್‌ನ ಟವರೊಂದರ ವ್ಯಾಪ್ತಿಯಲ್ಲಿದ್ದ ಮಾಹಿತಿ ಸಿಕ್ತು! ಪಾಪ, ಮೋಹಿತನಿಗೆ ಸೋಮಯ್ಯ ಗುಜರಾತಿ ಬಲ್ಲ, ಆತನಿಗೆ ತನ್ನ ಮೇಲೆ ಸಂಶಯ ಬಂದಿದೆ ಎಂಬುದು ಗೊತ್ತೇ ಇರಲಿಲ್ಲ. ಡಿಸೋಜ, ಮೋಹಿತ್ ತನಗೆ ಪೊಲೀಸ್ ರಕ್ಷಣೆ ಕೋರಿದ್ದು ಯಾಕೆ ಗೊತ್ತೆ? ಆತನಿಗೆ ಭಯವಿತ್ತು. ಎಂದಾದರೂ, ಆ ವಜ್ರ ವ್ಯಾಪಾರಿ ಬಾಡಿಗೆ ಕೊಲೆಗಾರರನ್ನು ಕಳಿಸಿ, ತನ್ನನ್ನು ಕೊಲ್ಲಬಹುದು ಅಂತ. ಅದಕ್ಕೆ ಸಾಲ ಅಂತ ಸುಳ್ಳು ಹೇಳಿ, ರಕ್ಷಣೆ ಕೋರಿದ್ದ."

"ಕಾಲಿಯಾ ವರ್ಷಿಣಿಯನ್ನು ಭೇಟಿಯಾಗಿದ್ದ ಅಂತ ಅಂಗಡಿಯವನು ಹೇಳ್ದ."

"ಹೂಂ. ಅವ್ನಿಗೆ ಆಕೆಯನ್ನು ಭೇಟಿಯಾಗಲು ಹೇಳುವ ಅವಕಾಶ ಇದ್ದಿದ್ದು ಸೋಮಯ್ಯನಿಗೆ ಮಾತ್ರ! ಆಕೆಗೆ ಗಂಡನೊಂದಿಗೆ ಸಂಬಂಧ ಚೆನ್ನಾಗಿಲ್ಲವೆಂದು ಗೊತ್ತಿತ್ತಲ್ಲ. ಹಾಗಾಗಿ ಮೋಹಿತನ ಕೊಲೆಗೆ ನೆರವಾಗ್ತಾಳೆ ಅಂತ ಹೇಳ್ದ. ಕಾಲಿಯಾ ಮೇ ತಿಂಗಳಲ್ಲಿ ಬಂದಿದ್ದ. ಆತ ಬೇನಾಮಿ ಹೆಸರಲ್ಲಿದ್ದ ಫೋನಿಂದ ಕರೆ ಮಾಡ್ತಿದ್ದ. ಅದರಿಂದ ಸೋಮಯ್ಯನಿಗೂ, ವರ್ಷಿಣಿಗೂ ಕರೆಗಳು ಬಂದಿದ್ದವು. ವರ್ಷಿಣಿಯೂ ಆತನಿಗೆ ನೆರವಾಗ್ತಾಳೆ. ಕಾಲಿಯಾ ಮೋಹಿತನ ಕೊಲೆ ಮಾಡಿದ್ರೆ ತನ್ನ ದಾರಿಯಲ್ಲಿರುವ ಮುಳ್ಳು ಹೋದಂತೆ ಅಂತ ಭಾವಿಸುತ್ತಾಳೆ. ಕಾಲಿಯಾ ಆಕೆಯ ನೆರವಿನಿಂದ ಮೋಹಿತನ ಕೊಠಡಿ ಜಾಲಾಡ್ತಾನೆ. ಅಲ್ಲಿ ವಜ್ರ ಸಿಗಲಿಲ್ಲ. ಆಮೇಲೆ ಮೋಹಿತನನ್ನ ಭೇಟಿಯಾಗಿರಬೇಕು. ಆದ್ರೆ ಮೋಹಿತ್ ಹೇಗೋ ಅವನನ್ನು ಸಮಾಧಾನಿಸಿ, ಸಾಗ ಹಾಕಿರಬೇಕು! ಬಹುಶಃ ವಜ್ರಗಳು ಆರ್ಮುಗಂ ಬಳಿ ಇದೆ ಎಂದು ಸುಳ್ಳಾಡಿರಬೇಕು. ಕಾಲಿಯಾ ಆರ್ಮುಗಂ ಹಿಂದೆ ಬಿದ್ದಿದ್ದಾನೆ. ಕಳೆದ ವಾರದ ಪತ್ರಿಕೆಯಲ್ಲಿ ಸೂರತ್‌ನಲ್ಲಿ ವ್ಯಕ್ತಿಯೊಬ್ಬನ ಹತ್ಯೆಯಾಗಿದೆ, ಅದಕ್ಕೂ, ವಜ್ರಗಳ ನಾಪತ್ತೆಗೂ ಸಂಬಂಧವಿರಬೇಕೆಂದು ವರದಿಯಾಗಿತ್ತು! ಅಲ್ಲಿದ್ದ ಫೋಟೊ ಆರ್ಮುಗಂನದ್ದು!! ಆರ್ಮುಗಂನ ಕೊಂದ ಕಾಲಿಯಾ, ವಜ್ರ ಸಿಗದಿದ್ದಾಗ ಇಲ್ಲಿಗೆ ಬಂದು, ಮೋಹಿತನಿಗೆ ಕರೆ ಮಾಡಿದ್ದಾನೆ. ಮೋಹಿತ ಭೀತಿಗೊಂಡಿದ್ದಾನೆ. ಕಾಲಿಯಾನ ಚರವಾಣಿ ನಗರದ ಟವರುಗಳ ವ್ಯಾಪ್ತಿಯಲ್ಲಿ ಎರಡು ದಿನಗಳಿಂದ ಇದ್ದುದು, ಆತ ಇಲ್ಲಿಗೆ ಬಂದಿದ್ದನ್ನು ಖಚಿತಪಡಿಸಿತ್ತು. ನಗರದ ಲಾಡ್ಜುಗಳಲ್ಲಿ ವಿಚಾರಿಸಿದಾಗ, ಕ್ರಚಸ್ ಹಿಡಿದ ಆಸಾಮಿ ಮಲೆನಾಡು ಹಿಲ್ಸ್ ಹೋಟೆಲಲ್ಲಿ ಉಳಿದುಕೊಂಡಿದ್ದು ಪತ್ತೆಯಾಯ್ತು. ಆತನ ಫೋಟೊ ಸಿಸಿ ಟೀವಿಯಲ್ಲಿತ್ತು. ಅದನ್ನ ತೆಗೆದು, ವರ್ಷಿಣಿ ಹಾಗೂ ಸೋಮಯ್ಯನಿಗೆ ರವಾನಿಸಿದೆ, ಅಷ್ಟೇ!"

"ಕಾಲಿಯಾ, ಮೋಹಿತ್ ಭಾರೀ ವಂಚನೆ ನಡೆಸಿದ್ದು, ಸಿಕ್ಕಿ ಬಿದ್ದರೆ ಜೈಲಿಗೆ ಹೋಗ್ತಾನೆ ಅಂತ ಹೇಳಿದ್ದ. ತಾನು ಆತನನ್ನು ಕೊಲೆ ಮಾಡಲು ಬಂದಿದ್ದು ಅಂತ ಹೇಳಿಲ್ಲ."

ವರ್ಷಿಣಿ ಸಮರ್ಥಿಸಿಕೊಂಡಳು. ಒಂದೋ ಜೈಲು. ಇಲ್ಲ ಸಾವು. ಎರಡರಿಂದಲೂ ಆಕೆಗೆ ಲಾಭ! ನಾನೆಂದುಕೊಂಡೆ.

"ಎಲ್ಲಾ ಸರಿ ಸಾರ್, ಮೋಹಿತ್ ಸತ್ತು ಹೋದನೆ?"

"ಮೋಹಿತ್ ಟ್ರೆಕಿಂಗಿನಲ್ಲಿ ಹುಷಾರಿ. ಕಾಲಿಯಾ ದೂಡಿದಾಗ ಜಾರಿದರೂ, ಕೆಳಗೆ ಬೀಳಲಿಲ್ಲ. ಅಲ್ಲಿ ಉದ್ದಕ್ಕೂ ಚಿಕ್ಕ ಚಿಕ್ಕ ಪೊದೆಗಳಿವೆ. ಮತ್ತು ಪ್ರಪಾತ ಕಾಣುವಷ್ಟು ಲಂಬವಾಗಿಲ್ಲ. ತುಸು ಓರೆಯಾಗಿ ಇಳಿಜಾರಿದೆ. ಒಬ್ಬ ನುರಿತ ಪರ್ವತಾರೋಹಿ ಲೀಲಾಜಾಲವಾಗಿ ಅಲ್ಲಿಂದ ಇಳಿದು ಹೋಗಬಲ್ಲ. ಒಂದೊಮ್ಮೆ ಮೋಹಿತ್ ಸತ್ತು ಹೋಗಿದ್ದರೂ, ದೇಹ ಅಲ್ಲೆಲ್ಲಿಯಾದರೂ, ಪೊದೆಗಳಿಗೆ ಸಿಲುಕಿ, ಕಾಣ ಸಿಗಲೇಬೇಕಿತ್ತು. ಆದ್ದರಿಂದ ಆತ ಸತ್ತಿಲ್ಲವೆಂಬ ತೀರ್ಮಾನಿಸಿದೆ. ಆದರೆ ಅವನಿಗೆ ಕಾಲಿಯಾ ಸತ್ತ ವಿಷ್ಯ ಗೊತ್ತಿಲ್ಲವಲ್ಲ. ಹಾಗಾಗಿ ಆತ ಎಲ್ಲಿಯೋ ಅವಿತಿರಲೇಬೇಕು!